## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 790/2017

ಸಾಕ್ಷಿಗೆ ದಿನಾಂಕ 28-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 9 P.W.: 6

| | | |
|---|---|---|
| ಹೆಸರು | ಃ | ಗುಡ್ಡಪ್ಪನವರ ಬಸಪ್ಪ |
| ತಂದೆಯ ಹೆಸರು | ಃ | ಗುಂಡಜ್ಜ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಬನ್ನಿಕಲ್ಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಆರೋಪಿ ನನಗೆ ಪರಿಚಯ ಇರುತ್ತಾರೆ. ಚಾಸಾ-1 ನನಗೆ ಪರಿಚಯ ಇಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ19-04-2005 ರಂದು ಚಾಸಾ-6 ರವರು ತನ್ನ ಮಗಳಾದ ಚಾಸಾ-1 ರವರ ವಿವಾಹ ಆರೋಪಿತನ ಜೊತೆ ಗೊತ್ತು ಮಾಡಿದ್ದು ಸದರಿ ಮದುವೆಯು ಶ್ರೀ ಮಹಾದೇವ ತಾತ ಮಠ ಮೋರಿಗೇರಿಯಲ್ಲಿದ್ದು ಸದರಿ ಮದುವೆಗೆ ಬರಲು ನಮಗೆ ಕೇಳಿಕೊಂಡಿದ್ದರಿಂದ ನಾನು ಮತ್ತು ನಮ್ಮ ಗ್ರಾಮದ ಚಾಸಾ-4, 10, 12, 8, 13 ರವರು ಸೇರಿ ಸದರಿ ಮದುವೆಗೆ ಹೋಗಿದ್ದು ನಮ್ಮ ಸಮ್ಮುಖದಲ್ಲಿ ಅವರ ಮದುವೆ ನೇರವೇರಿರುತ್ತದೆಂದರೆ ಸರಿಯಲ್ಲ. ಆರೋಪಿತನು ಚಾಸಾ-1 ರವರ ಜೊತೆ ಸ್ವಲ್ಪ ದಿನ ಸುಲಲಿತವಾಗಿ ಬಾಳುವೆ ಮಾಡಿದ್ದು ಇರುತ್ತದೆ ಅವರಿಗೆ ಒಂದು ಹೆಣ್ಣು ಮಗಳು ಅಕ್ಷಿತಾ ಅಂತಾ ಇರುತ್ತಾಳೆಂದರೆ ನನಗೆ ಗೊತ್ತಿಲ್ಲ. ನಂತರದಲ್ಲಿ ಆರೋಪಿತನು ಮಧ್ಯಪಾನ ಮಾಡುವುದು ಮತ್ತು ಇತರೆ ದುಶ್ಚಟಗಳಿಗೆ ಬಲಿಯಾಗಿ ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ಅವಳಿಗೆ ಹೊಡೆಬಡಿ ಮಾಡಿ ಅವಾಚ್ಯ ಶಬ್ದದಿಂದ ಬೈದು ಪ್ರಾಣಬೆದರಿಕೆ ಹಾಕಿರುತ್ತಾನೆ ಮತ್ತು ಅವಳ ಶೀಲದ ಬಗ್ಗೆ ಶಂಕಿಸಿರುತ್ತಾನಂತಾ ಚಾಸಾ-1 ರವರು ನ್ಯಾಯಾಲಯದಲ್ಲಿ ದೂರು ದಾಖಲಿಸಿರುವ ವಿಚಾರ ನನಗೆ ತಿಳಿದಿರುತ್ತದೆಂದರೆ ಸರಿಯಲ್ಲ.

ಘಟನೆಯ ಕುರಿತು ನಾನು ಪೋಲೀಸರ ಮುಂದೆ ದಿಃ24-12-2016 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ